**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 22.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 1 ರಿಂದ 4 ನೇ ಪ್ರತಿವಾದಿ ಪರ ಶ್ರೀ.ಆರ್ ಬಿ ಹೆಚ್ ವಕೀಲರಿಂದಃ**

7. ಅಸಲು ದಾವಾ ನಂ.39/2007 ಮತ್ತು FDP No.28/2012 ರಲ್ಲಿನ ಎಲ್ಲ ಪಕ್ಷಗಾರರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಹಾಗೂ ಎಲ್ಲ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲವಾದ ಕಾರಣ ಈ ದಾವೆ ಊರ್ಜಿತವಲ್ಲ ಎಂದರೆ ಸಾಕ್ಷಿ ಆ ಕೇಸ್ ಗಳ ಬಗ್ಗೆ ನನಗೆ ಅಷ್ಟು ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನಾನು ಸರ್ವೆ ನಂ.509 ಯನ್ನು ಖರೀದಿಸುವ ಪೂರ್ವದಲ್ಲಿ ಸದರಿ ಆಸ್ತಿಯ ಬಗ್ಗೆ ಇರುವ ಖರೀದಿ ಪತ್ರವನ್ನು ಹಾಗೂ ಉತಾರಗಳನ್ನು ನೋಡಿರುತ್ತೇನೆ. ಸದರಿ ಎಲ್ಲ ಖರೀದಿ ಪತ್ರಗಳು ಅಸಲು ದಾವಾ ನಂ.39/2007 ರಲ್ಲಿ ಆದೇಶ ಆದ ನಂತರದ ಖರೀದಿ ಪತ್ರಗಳು ಎಂದರೆ ಸಾಕ್ಷಿ ನಾನು ಗುಮ್ಮನಾಳರವರ ಖರೀದಿ ಪತ್ರ ಮಾತ್ರ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಸರ್ವೆ ನಂ.509 ರ ಎಷ್ಟು ವರ್ಷಗಳ ಉತಾರ ನೀವು ನೋಡಿರುತ್ತೀರಿ ಎಂದರೆ ಸಾಕ್ಷಿ ನಾನು ಚಾಲ್ತಿ ಉತಾರ ಮಾತ್ರ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ನೀವು ಸರ್ವೆ ನಂ.509 ನ್ನು ಖರೀದಿಸುವ ಸಮಯದಲ್ಲಿ ಅದರ ಮೂಲ ಖರೀದಿ ಪತ್ರಗಳು ಯಾವವು ಹಾಗೂ ಯಾರ ಯಾರ ಹೆಸರಿನಲ್ಲಿ ಉತಾರಗಳು ಇದ್ದವು ಎಂದು ನೋಡಿಲ್ಲ ಎಂದರೆ ಸಾಕ್ಷಿ ಖರೀದಿಸುವ ಸಮಯದಲ್ಲಿ ನೋಡಿಲ್ಲ ಆದರೆ ಈ ಪ್ರಕರಣ ದಾಖಲಿಸುವ ಸಮಯದಲ್ಲಿ ವಕೀಲರಿಂದ ತಿಳಿದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಹನಮಂತಪ್ಪ ಅವರ ಖರೀದಿ ಪತ್ರದ ನಂತರ ಆದ ಖರೀದಿ ಪತ್ರವನ್ನು

ನೀವು ಆಸ್ತಿಯನ್ನು ಖರೀದಿಸುವ ಮೊದಲು ನೋಡಿಲ್ಲ ಎಂದರೆ ಸಾಕ್ಷಿ ಹೌದು ನಾನು ಗುಮ್ಮನಾಳರವರ ಖರೀದಿ ಪತ್ರ ಮಾತ್ರ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಸರ್ವೆ ನಂ.509 ಯನ್ನು ಖರೀದಿಸುವ ಮುಂಚೆ ನನ್ನ ಹಾಗೂ ವಾದಿ ನಂ.1 ಇವರ ಮಧ್ಯ ಒಡನಾಟ ಇತ್ತು ಹಾಗೂ ಒಳ್ಳೆಯ ಸಂಬಂಧ ಇತ್ತು ಎಂದರೆ ಸಾಕ್ಷಿ ಆಸ್ತಿ ಖರೀದಿಸಲು ಬಂದಾಗ ಮಾತ್ರ ಅವರು ನನಗೆ ಪರಿಚಯ ಎಂದು ನುಡಿಯುತ್ತಾರೆ.

8. ವಾದಿ ನಂ.1 ಇವರ ಜೊತೆ ಸರ್ವೆ ನಂ.509 ನ್ನು ನೀವು ಎಷ್ಟಕ್ಕೆ ಖರೀದಿಸಿರುತ್ತೀರಿ ಎಂಬ ಬಗ್ಗೆ ನಾನು ಮಾತನಾಡಲಿಲ್ಲ. ಸಾಮಾನ್ಯವಾಗಿ ಖರೀದಿ ಪತ್ರ ನೊಂದಣಿ ಮಾಡಿಕೊಳ್ಳಬೇಕಾದರೆ ಖರೀದಿಗೆ ಕೊಡುವವರು, ಖರೀದಿಗೆ ನೀಡುವವರು ಹಾಗೂ ಇಬ್ಬರ ಪರ ಸಾಕ್ಷಿದಾರರು ಉಪನೋಂದಣಾಧಿಕಾರಿ ಕಚೇರಿಗೆ ಹೋಗುತ್ತಾರೆ ಎಂದರೆ ಸರಿ. ತಮಗೆ ಬೇಕಾದವರ ಹಾಗೂ ಪರಿಚಯ ಇರುವ ವ್ಯಕ್ತಿಗಳನ್ನು ಸಾಕ್ಷಿಯಾಗಿ ಕರೆದುಕೊಂಡು ಹೋಗುತ್ತಾರೆ ಎಂದರೆ ಸರಿ. ನನ್ನ ಖರೀದಿ ಪತ್ರಕ್ಕೆ ವಾದಿ ನಂ.1 ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ. ಅದೇ ರೀತಿ ನಾನು ಅವರ ಖರೀದಿ ಪತ್ರಕ್ಕೆ ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ. ಸರ್ವೆ ನಂ.509 ಗೆ ಸಂಬಂಧಿಸಿದ ಖರೀದಿ ಪತ್ರಗಳು ಹಾಗೂ ಉತಾರಗಳು ನಿಮ್ಮ ಹತ್ತಿರ ಇವೆ ಎಂದರೆ ಸಾಕ್ಷಿ ನಮ್ಮ ವಕೀಲರ ಹತ್ತಿರ ಇದೆ ಎಂದು ನುಡಿಯುತ್ತಾರೆ. ಸದರಿ ದಾಖಲೆಗಳನ್ನು ಹಾಜರಪಡಿಸಲು ನನಗೆ ತೊಂದರೆ ಇರಲಿಲ್ಲ. ಸರ್ವೆ ನಂ.509 ಗೆ ಸಂಬಂಧಪಟ್ಟ ದೃಢಿಕೃತ ಕಾಗದಪತ್ರಗಳನ್ನು ನಾನು ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತೇನೆ ಅಸಲು ದಾಖಲೆಗಳನ್ನು ಬೇಕಿದ್ದರೆ ಹಾಜರಪಡಿಸುತ್ತೇನೆ ಎಂದು ನುಡಿಯುತ್ತಾರೆ. ಸರ್ವೆ ನಂ.509 ಗೆ ಸಂಬಂಧಿಸಿದ ಖರೀದಿ ಪತ್ರಗಳನ್ನು ಹಾಗೂ ಉತಾರಗಳನ್ನು ನೀವು ಹಾಜರಪಡಿಸಿಲ್ಲ ಹಾಗೂ ಅವುಗಳನ್ನು ಹಾಜರಪಡಿಸಿದರೆ ಸತ್ಯಸಂಗತಿ ಹೊರಬರುತ್ತದೆ ಎಂಬ

ಕಾರಣಕ್ಕೆ ಹಾಜರಪಡಿಸಿಲ್ಲ ಎಂದರೆ ಸಾಕ್ಷಿ ಅಸಲು ದಾಖಲೆಗಳನ್ನು ನಾನು ಹಾಜರಪಡಿಸುತ್ತೇನೆ ಎಂದು ನುಡಿಯುತ್ತಾರೆ.

9. ಈ ದಾವೆಯಲ್ಲಿ ಸಾಕ್ಷಿ ನುಡಿಯಲು ಬರುವ ಪೂರ್ವದಲ್ಲಿ ನಾನು ಯಾವ ಯಾವ ದಾಖಲೆಗಳನ್ನು ಹಾಜರಪಡಿಸಿರುತ್ತೇನೆ ಎಂಬುದರ ಬಗ್ಗೆ ನಮ್ಮ ವಕೀಲರಿಂದ ತಿಳಿದುಕೊಂಡಿರುತ್ತೇನೆ. ನಿಮ್ಮ ಪರವಾಗಿ ಉತಾರ ಅಥವಾ ಖರೀದಿ ಪತ್ರಗಳು ನಿಶಾನೆಗಳನ್ನಾಗಿ ಗುರುತಿಸಲಾಗಿದೆಯಾ ಅಥವಾ ಇಲ್ಲ ಎಂದು ವಕೀಲರಿಂದ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ.509 ಗೆ ಸಂಬಂಧಪಟ್ಟಂತೆ ಪ್ರಕರಣಗಳು ಆದ ಬಗ್ಗೆ ನಾನು ಹಾಗೂ ಗುರಿಕಾರ ಇವರು ಪ್ರತಿವಾದಿ ನಂ.1 ರಿಂದ 4 ಇವರ ಮನೆಗೆ ಹೋಗಿದ್ದೇವು ಎಂದರೆ ಸಾಕ್ಷಿ ಹೋಗಿಲ್ಲ ಎಂದು ನುಡಿಯುತ್ತಾರೆ. ನೀವು ಹಾಗೂ ಗುರಿಕಾರ ಇವರು ಪ್ರತಿವಾದಿ ನಂ.1 ರಿಂದ 4 ಇವರಿಗೆ ನಾವು ಆಸ್ತಿ ಖರೀದಿಸಿರುತ್ತೇವೆ ಹಾಗೂ ಹಣ ಪಡೆದು ರಾಜೀಯಾಗಿ ಎಂದು ಕೇಳಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.1 ರಿಂದ 4 ಸರ್ವೆ ನಂ.509 ಹಿರಿಯರ ಆಸ್ತಿ ಹಾಗೂ ಅದು ತಮಗೆ ಬೇಕು ಎಂದು ನಿಮ್ಮ ಮನವಿ ತಿರಸ್ಕಾರ ಮಾಡಿದರು ಎಂದರೆ ಸಾಕ್ಷಿ ನಾವು ಹೋಗಿಯೇ ಇಲ್ಲ ಎಂದು ನುಡಿಯುತ್ತಾರೆ. ಅವರು ತಿರಸ್ಕಾರ ಮಾಡಿದ ನಂತರವೇ ನೀವು ಅಸಲು ದಾವಾ ನಂ.221/2021 ಸಲ್ಲಿಸಿದ್ದೇವು ಎಂದರೆ ಸಾಕ್ಷಿ ನಾವು ಹೋಗಿಯೇ ಇಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯರ ವಿರುದ್ಧ ನಾನು ಅಸಲು ದಾವಾ ನಂ.221/2021 ನ್ನು ಸಲ್ಲಿಸಿದ ವಿಷಯ ನಿಜವಿರುತ್ತದೆ. ನಿಮ್ಮ ಖರೀದಿ ಪತ್ರ ಆದ ನಂತರವಾದರೂ ಸಹ ದಾವಾ ಆಸ್ತಿ ಬಗ್ಗೆ ಏನು ಎಂದು ನೀವು ಖರೀದಿಗೆ ನೀಡಿದವರ ಹತ್ತಿರ

ವಿಚಾರಿಸಿರುತ್ತೀರಾ ಎಂದರೆ ಸಾಕ್ಷಿ ನ್ಯಾಯಾಲಯದ ಬೇಲಿಫ್ ಬರುವವರೆಗೂ ನಮಗೆ ಪ್ರಕರಣಗಳ ಬಗ್ಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ.

10. 2010 ರಿಂದ ಆದ ಖರೀದಿ ಪತ್ರಗಳ ಬಗ್ಗೆ ನಿಮ್ಮ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ನಮೂದಿಸಿರುತ್ತೀರಾ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ಸದರಿ ಖರೀದಿ ಪತ್ರಗಳು ಎಷ್ಟು ಮೊತ್ತಕ್ಕೆ ಹಾಗೂ ಎಷ್ಟು ಕ್ಷೇತ್ರಕ್ಕೆ ಆಗಿರುತ್ತವೆ ಎಂದು ಅದರಲ್ಲಿ ನಮೂದಿಸಿರುತ್ತೀರಾ ಎಂದರೆ ಸಾಕ್ಷಿ ನನಗೆ ನೆನಪು ಬರುತ್ತಿಲ್ಲ ಎಂದು ನುಡಿಯುತ್ತಾರೆ. ಮುಂಚೆಯ ಖರೀದಿಪತ್ರಗಳ ಬಗ್ಗೆ ನಿಮ್ಮ ವಕೀಲರಿಗೆ ಮಾಹಿತಿ ನೀಡಿರುತ್ತೀರಾ ಎಂದರೆ ಸಾಕ್ಷಿ ಡ ಉತಾರ ತೆಗೆಸಿದ್ದೆ ಅದರಲ್ಲಿ ಎಲ್ಲವೂ ಬಂತು ಅದನ್ನು ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ಸರ್ವೆ ನಂ.509 ರ ಬಗ್ಗೆ ನಾನು ಎಲ್ಲ ಡ ಉತಾರಗಳನ್ನು ತೆಗೆಸಿರುತ್ತೇನೆ.

11. ದಿಃ29/09/2018 ರಂದು ಸರ್ವೆ ನಂ.652 ರಲ್ಲಿ 2 ಎಕರೆ ಆಸ್ತಿಯನ್ನು ವಾದಿ ನಂ.1 ಇವರು ಪ್ರತಿವಾದಿ ನಂ.8 ಇವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಷಯ ನಿಮಗೆ ಗೊತ್ತಿಲ್ಲ ಎಂದು ನಿಮ್ಮ ಪ್ರಮಾಣಪತ್ರದಲ್ಲಿ ಅಥವಾ ವಾದಪತ್ರದಲ್ಲಿ ತಿಳಿಸಿರುತ್ತೀರಾ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಅಷ್ಟು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಪ್ರತಿವಾದಿ ನಂ.8 ಇವರು ಅಸಲು ದಾವಾ ನಂ.51/2022 ಸಲ್ಲಿಸಿರುತ್ತಾರೆ ಎಂಬುದರ ಬಗ್ಗೆ ನಾನು ಹೇಳಿರುವುದಿಲ್ಲ. ಅಸಲು ದಾವಾ ನಂ.39/2007 ಇದು ದಿಃ09/06/2008 ರಂದು ಡಿಕ್ರಿಯಾಗಿದೆ ಎಂದರೆ ಸರಿ. ಹನಮಂತಪ್ಪ ಪವಾರ ಇವರು ಅಸಲು ದಾವಾ ನಂ.39/2007 ಡಿಕ್ರಿಯಾದ ನಂತರ ಆಸ್ತಿ ಮಾರಾಟ ಮಾಡಿದ ಕಾರಣ ಅದರಲ್ಲಿ ನಮ್ಮನ್ನು ಅಥವಾ ಇತರೆ ಖರೀದಿದಾರರನ್ನು

ಪಕ್ಷಗಾರರನ್ನಾಗಿ ಮಾಡುವ ಅವಶ್ಯಕತೆ ಇರಲಿಲ್ಲ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರ್ ಎ ನಂ.131/2008 ರ ಬಗ್ಗೆ ನಿಮ್ಮ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ನಮೂದಿಸಿರುತ್ತೀರಾ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ಹನಮಂತಪ್ಪ ಪವಾರ ಯಾವಾಗ ತೀರಿಕೊಂಡರು ಎಂಬುದರ ಬಗ್ಗೆ ನೀವು ಮಾಹಿತಿ ನೀಡಿರುತ್ತೀರಾ ಎಂದರೆ ಸಾಕ್ಷಿ ನೀಡಿರುತ್ತೇನೆ ಎಂದು ನುಡಿಯುತ್ತಾರೆ.

12. ಹನಮಂತಪ್ಪ ಹಾಗೂ ಅವರ ಮಕ್ಕಳ ಮಧ್ಯ ತಕರಾರು ಇದ್ದ ಕಾರಣ ಅಸಲು ದಾವಾ ನಂ.39/2007 ದಾಖಲಿಸಲಾಗಿತ್ತು ಎಂದರೆ ಸರಿ. ಮಲ್ಲವ್ವ ಮಹಾದೇವಪ್ಪ ಮಾನೆ ಹಾಗೂ ಹನಮಂತಪ್ಪ ಪವಾರ ಇವರ ಮಧ್ಯ ಯಾವುದೇ ತಕರಾರು ಇರಲಿಲ್ಲ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮಲ್ಲವ್ವ ಮಹಾದೇವಪ್ಪ ಮಾನೆ ಹಾಗೂ ಹನಮಂತಪ್ಪ ಪವಾರ ಇವರ ಮಧ್ಯ ತಕರಾರು ಇತ್ತು ಹಾಗಾಗಿ ಈರಣ್ಣ ಪವಾರ ಎಂಬುವವರ ಕಡೆಯಿಂದ ಕೇಸ್ ದಾಖಲಿಸಿರುತ್ತದೆ ಎಂಬುದರ ಬಗ್ಗೆ ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಉಲ್ಲೇಖಿಸಿದೆ ಅಥವಾ ಇಲ್ಲ ಎಂದು ನನಗೆ ಮಾಹಿತಿ ಇಲ್ಲ. ಹನಮಂತಪ್ಪ ತನ್ನ ಹೆಂಡತಿ ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳುತ್ತಿರಲಿಲ್ಲ ಹಾಗೂ ಅವರ ಉಪಜೀವನಕ್ಕೆ ಹಣ ನೀಡುತ್ತಿರಲಿಲ್ಲ ಹಾಗಾಗಿ ಹನಮಂತಪ್ಪನ ಹೆಂಡತಿ ಮಕ್ಕಳು ಅಸಲು ದಾವಾ 39/2007 ನ್ನು ಸಲ್ಲಿಸಿದ್ದರು ಎಂದರ ಸಾಕ್ಷಿ ಅವರಿಬ್ಬರ ಮಧ್ಯ ಜಗಳವಿತ್ತು ಆದರೆ ಯಾವ ಕಾರಣಕ್ಕೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ಕಾರಣಕ್ಕಾಗಿ ಹನಮಂತಪ್ಪನ ಹೆಂಡತಿ ಮಕ್ಕಳು ಹನಮಂತಪ್ಪನ ಹೆಂಡತಿಯ ತವರು ಮನೆಯಲ್ಲಿ ವಾಸವಾಗಿದ್ದರು ಎಂದರೆ ನನಗೆ ಗೊತ್ತಿಲ್ಲ.

**(ಮುಂದುವರೆದ ಪಾಟೀ ಸವಾಲುಃ 1 ರಿಂದ 4 ನೇ ಪ್ರತಿವಾದಿ ಪರ ಶ್ರೀ.ಆರ್ ಬಿ ಹೆಚ್ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು).**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**